Akashvani : Bangalore
National Bulletin In Kannada
15.03.2025 : 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

******

ಮುಖ್ಯಾಂಶಗಳು:

- ಅಸ್ಸಾಂನಲ್ಲಿಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ
- ಇಂದು ವಿಶ್ವ ಗ್ರಾಹಕ ಹಕ್ಕುಗಳ ದಿನ; ಸುಸ್ಥಿರ ಜೀವನಶೈಲಿಯಡೆಗೆ ನ್ಯಾಯಯುತ ಪರಿವರ್ತನೆ ಈ ವರ್ಷದ ಧ್ಯೇಯವಾಕ್ಯ
- ಕೇಂದ್ರ ಗಣಿ ಸಚಿವಾಲಯದಿಂದ ದೇಶದ ಮೊದಲ ಪರಿಶೋಧನಾ ಪರವಾನಗಿ ಹರಾಜು ಆರಂಭ
- ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್; ಫೈನಲ್‌ನಲ್ಲಿಂದು ಮುಂಬೈ ಇಂಡಿಯನ್ಸ್-ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿ

************

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಅಸ್ಸಾಂನಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಅವರು ನಿನ್ನೆ ಸಂಜೆ ಅಸ್ಸಾಂನ ಗೋಲಾಘಾಟ್‌ಗೆ ಆಗಮಿಸಿದರು. ಗೋಲಾಘಾಟ್ ಜಿಲ್ಲೆಯ ದೇರ್ಗಾಂವ್‌ನಲ್ಲಿಂದು ಅವರು, ಅತ್ಯಾಧುನಿಕ ಲಚಿತ್ ಬರ್ಫುಕನ್ ಪೊಲೀಸ್ ಅಕಾಡೆಮಿಯನ್ನು ಉದ್ಘಾಟಿಸಲಿದ್ದಾರೆ ಮತ್ತು ಪೊಲೀಸ್ ಅಕಾಡೆಮಿಯ ವಸತಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗ ಸಚಿವ ಸರ್ಬಾನಂದ ಸೋನೋವಾಲ್ ಉಪಸ್ಥಿತರಿರಲಿದ್ದಾರೆ. ಇಂದು ಮಧ್ಯಾಹ್ನ, ಗೃಹ ಸಚಿವರು ಅಸ್ಸಾಂ ರೈಫಲ್ಸ್ ನೆಲೆಯನ್ನು ಐಜ್ವಾಲ್ ನಗರದಿಂದ ಜೋಖಾವ್ಸಾಂಗ್‌ಗೆ ಸ್ಥಳಾಂತರಿಸುವ ಸಮಾರಂಭದಲ್ಲಿ ಭಾಗವಹಿಸಲು ಮಿಜೋರಾಂಗೆ ಭೇಟಿ ನೀಡಲಿದ್ದಾರೆ. ನಾಳೆ, ಅವರು ಕೊಕ್ರಝಾರ್ ಜಿಲ್ಲೆಯ ದೋಟ್ಮಾದಲ್ಲಿ ಆಲ್ ಬೋಡೋ ಸ್ಟೂಡೆಂಟ್ಸ್ ಯೂನಿಯನ್‌ನ ೫೭ ನೇ ವಾರ್ಷಿಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಲಿದ್ದಾರೆ.

ನಂತರ, ಗುವಾಹಟಿಯಲ್ಲಿ ಎಂಟು ಈಶಾನ್ಯ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಈಶಾನ್ಯ ರಾಜ್ಯಗಳಲ್ಲಿ ಹೊಸ ಕ್ರಿಮಿನಲ್ ಕಾನೂನುಗಳ ಅನುಷ್ಠಾನವನ್ನು ಪರಿಶೀಲಿಸಲಿದ್ದಾರೆ.

************

ಇಂದು ವಿಶ್ವ ಗ್ರಾಹಕ ಹಕ್ಕುಗಳ ದಿನ. ಗ್ರಾಹಕರ ಹಕ್ಕುಗಳು ಮತ್ತು ಅದರ ರಕ್ಷಣೆ ಎತ್ತಿಹಿಡಿಯುವ ಅಗತ್ಯವನ್ನು ನೆನಪಿಸುವ ಈ ದಿನವನ್ನು ಪ್ರತಿ ವರ್ಷ ಮಾರ್ಚ್ ೧೫ ರಂದು ಆಚರಿಸಲಾಗುತ್ತದೆ. ಎಲ್ಲಾ ಗ್ರಾಹಕರ ಮೂಲಭೂತ ಹಕ್ಕುಗಳನ್ನು ಉತ್ತೇಜಿಸಲು ಮತ್ತು ಆ ಹಕ್ಕುಗಳನ್ನು ಗೌರವಿಸಿ, ರಕ್ಷಿಸಿ, ಪ್ರೋತ್ಸಾಹಿಸಲು ಈ ದಿನ ಅವಕಾಶ ಒದಗಿಸುತ್ತದೆ.

ಈ ಕುರಿತು ಒಂದು ವರದಿ

'ಸುಸ್ಥಿರ ಜೀವನಶೈಲಿಯೆಡೆಗೆ ನ್ಯಾಯಯುತ ಪರಿವರ್ತನೆ' ಎಂಬುದು ೨೦೨೫ ರ ವಿಶ್ವ ಗ್ರಾಹಕ ಹಕ್ಕುಗಳ ದಿನದ ಧ್ಯೇಯವಾಕ್ಯವಾಗಿದೆ. ಗ್ರಾಹಕರ ಹಕ್ಕುಗಳನ್ನು ರಕ್ಷಿಸಲು ಮತ್ತು ಅವರ ಕುಂದುಕೊರತೆಗಳನ್ನು ಶೀಘ್ರವಾಗಿ ಪರಿಹರಿಸಲು ಸರ್ಕಾರ ವಿವಿಧ ಕ್ರಮಗಳನ್ನು ತೆಗೆದುಕೊಂಡಿದೆ. ಗ್ರಾಹಕ ವ್ಯವಹಾರಗಳ ಸಚಿವಾಲಯವು ಜಾಗೋ ಗ್ರಾಹಕ ಜಾಗೋ ಮೂಲಕ ವಿವಿಧ ಗ್ರಾಹಕ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಕುಂದುಕೊರತೆಗಳಿಗೆ ಪರಿಹಾರವನ್ನು ತ್ವರಿತಗೊಳಿಸಲು ರಾಷ್ಟ್ರೀಯ ಗ್ರಾಹಕ ಸಹಾಯವಾಣಿ, ಸಾವಿರಕ್ಕೂ ಹೆಚ್ಚು ಕಂಪನಿಗಳೊಂದಿಗೆ ಪಾಲುದಾರಿಕೆ ಹೊಂದಿದೆ. ಇ-ವಾಣಿಜ್ಯದಲ್ಲಿ ಅನ್ಯಾಯದ ವ್ಯಾಪಾರ ಪದ್ಧತಿಗಳಿಂದ ಗ್ರಾಹಕರನ್ನು ರಕ್ಷಿಸಲು, ಗ್ರಾಹಕ ವ್ಯವಹಾರಗಳ ಇಲಾಖೆಯು ಗ್ರಾಹಕ ಸಂರಕ್ಷಣಾ-ಇ-ವಾಣಿಜ್ಯ ನಿಯಮಗಳು, ೨೦೨೦ ಅನ್ನು ಪ್ರಕಟಿಸಿದೆ. ಈ ನಿಯಮಗಳು ಇ-ವಾಣಿಜ್ಯ ಘಟಕಗಳ ಜವಾಬ್ದಾರಿಗಳನ್ನು ವಿವರಿಸಿ, ಗ್ರಾಹಕರ ಕುಂದುಕೊರತೆ ಪರಿಹಾರಕ್ಕಾಗಿ ನಿಬಂಧನೆಗಳನ್ನು ಒಳಗೊಂಡಂತೆ ಮಾರುಕಟ್ಟೆ ಮತ್ತು ದಾಸ್ತಾನು ಇ-ವಾಣಿಜ್ಯ ಘಟಕಗಳ ಜವಾಬ್ದಾರಿಗಳನ್ನು ತಿಳಿಸುತ್ತವೆ.

************

ಭಾರತದ ಗಣಿಗಾರಿಕೆ ವಲಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಕೇಂದ್ರ ಗಣಿ ಸಚಿವಾಲಯವು ಗೋವಾ ಸರ್ಕಾರದ ಸಹಯೋಗದೊಂದಿಗೆ ಭಾರತದ ಮೊದಲ ಪರಿಶೋಧನಾ ಪರವಾನಗಿಗಳ ಹರಾಜನ್ನು ಪ್ರಾರಂಭಿಸಿದೆ.ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ. ಕಿಶನ್ ರೆಡ್ಡಿ ಮತ್ತು ಗೋವಾದ ಮುಖ್ಯಮಂತ್ರಿ ಡಾ.

ಪ್ರಮೋದ್ ಸಾವಂತ್ ಅವರು ಗೋವಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಉಪಕ್ರಮವನ್ನು ಅನಾವರಣಗೊಳಿಸಿದರು. ಈ ಉಪಕ್ರಮದಲ್ಲಿ ಸತು, ತಾಮ್ರ ಮತ್ತು ವಜ್ರದಂತಹ ನಿರ್ಣಾಯಕ ಖನಿಜಗಳನ್ನು ಒಳಗೊಂಡ ೧೩ ಪರಿಶೋಧನಾ ಪರವಾನಗಿ ಬ್ಲಾಕ್‌ಗಳ ಮೇಲೆ ಹರಾಜು ಕೇಂದ್ರೀಕರಿಸುತ್ತದೆ. ಈ ಪಾರದರ್ಶಕ, ಆನ್‌ಲೈನ್ ಬಿಡ್ಡಿಂಗ್ ಪ್ರಕ್ರಿಯೆಯು ವ್ಯವಸ್ಥಿತ ಪರಿಶೋಧನೆಯನ್ನು ವೇಗಗೊಳಿಸಲು ಮತ್ತು ಖನಿಜ ಆಮದಿನ ಮೇಲಿನ ಭಾರತದ ಅವಲಂಬನೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ. ಈ ಕಾರ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆಯ ಮೂಲಕ ಖನಿಜ ಗುರಿಯನ್ನು ಅನ್ವೇಷಿಸುವ ಕೃತಕ ಬುದ್ಧಿಮತ್ತೆ ಹ್ಯಾಕಥಾನ್ ೨೦೨೫ಕ್ಕೆ ಚಾಲನೆ ನೀಡಲಾಯಿತು. ಖಾಸಗಿ ವಲಯದ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಕ್ರಮವಾಗಿ, ಮೂರು ಖಾಸಗಿ ಪರಿಶೋಧನಾ ಸಂಸ್ಥೆಗಳಿಗೆ ಈ ಸಂದರ್ಭದಲ್ಲಿ ಪ್ರಮಾಣಪತ್ರಗಳನ್ನು ನೀಡಲಾಯಿತು.

************

ಒಂದು ದಿನದ ತಮಿಳುನಾಡು ಭೇಟಿಗಾಗಿ ಇಂದು ಕೇಂದ್ರ ರೈಲ್ವೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಚೆನ್ನೈಗೆ ಆಗಮಿಸಲಿದ್ದಾರೆ. ಈ ವೇಳೆ ಅವರು, ತಿರುವಳ್ಳುರ್‌ನಲ್ಲಿರುವ ಝಟ್‌ವರ್ಕ್ ಎಲೆಕ್ಟ್ರಾನಿಕ್ಸ್‌ನ ನೂತನ ಕ್ಯಾಂಪಸ್ ಉದ್ಘಾಟನೆ ನೆರವೇರಿಸಲಿದ್ದಾರೆ. ಇದೇ ವೇಳೆ ಸಚಿವರು, ಹೈಪರ್ ಲೂಪ್ ಪಾಡ್‌ಗೆ ಭೇಟಿ ನೀಡಲಿದ್ದು, ಐಐಟಿಯ ಥೈಯೂರ್ ಕ್ಯಾಂಪಸ್‌ನ ತಂಡದೊಂದಿಗೆ ಸಂವಾದ ನಡೆಸಲಿದ್ದಾರೆ.

************

ಪಿಎಂ-ಗತಿಶಕ್ತಿ ನೇತೃತ್ವದ ಯೋಜನೆಯಡಿ ೮೯ನೇ ಯೋಜನಾ ಗುಂಪಿನ ಸಭೆ ನಿನ್ನೆ ನಡೆದಿದ್ದು, ಈ ವೇಳೆ ರಸ್ತೆ, ರೈಲ್ವೆ ಮತ್ತು ಮೆಟ್ರೋ ವಲಯಗಳಲ್ಲಿ ಪ್ರಮುಖ ಮೂಲಸೌಕರ್ಯಗಳ ಕುರಿತು ಮೌಲ್ಯಮಾಪನ ಮಾಡಲಾಗಿದೆ. ಇದೇ ವೇಳೆ ಸಭೆಯಲ್ಲಿ ನಾಲ್ಕು ರಸ್ತೆ, ಮೂರು ರೈಲ್ವೆ ಮತ್ತು ಒಂದು ಮೆಟ್ರೋ ವಲಯ ಸೇರಿದಂತೆ ಒಟ್ಟು ಎಂಟು ಯೋಜನೆಗಳನ್ನು ಮೌಲ್ಯಮಾಪನ ಮಾಡಲಾಯಿತು. ಈ ಯೋಜನೆಯು ಮೇಘಾಲಯದ ಎನ್‌ಎಚ್-೬೨ ರ ದಾರುಗಿರಿಯಿಂದ ಡಾಲು ವಿಭಾಗದ ರಸ್ತೆಯನ್ನು ದ್ವಿಪಥ ಹೆದ್ದಾರಿಯಾಗಿ ಅಭಿವೃದ್ಧಿಪಡಿಸುವುದನ್ನು ಒಳಗೊಂಡಿದೆ.

ರೈಲ್ವೆ ಸಚಿವಾಲಯದ ೩೨ ಕಿಲೋಮೀಟರ್ ಉದ್ದದ ಬ್ರೌನ್‌ಫೀಲ್ಡ್ ಯೋಜನೆಯು ಮುಂಬೈ-ಪುಣೆ-ಸೋಲಾಪುರ-ವಾಡಿ-ಚೆನ್ನೈ ಕಾರಿಡಾರ್‌ನಲ್ಲಿ ಹೆಚ್ಚುತ್ತಿರುವ ಪ್ರಯಾಣಿಕರ ಮತ್ತು ಸರಕು ಸಾಗಣೆ ದಟ್ಟಣೆಯನ್ನು ಪರಿಹರಿಸುತ್ತದೆ. ಈ ಉಪಕ್ರಮಗಳು ಸರಕು ದಕ್ಷತೆಯನ್ನು ಹೆಚ್ಚಿಸುವ, ಪ್ರಯಾಣದ ಸಮಯವನ್ನು ಕಡಿಮೆ ಮಾಡುವ ಮತ್ತು ಗಮನಾರ್ಹ ಸಾಮಾಜಿಕ-ಆರ್ಥಿಕ ಪ್ರಯೋಜನಗಳನ್ನು ನೀಡುವ ನಿರೀಕ್ಷೆಯಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

************

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ - ಐಎಸ್‌ಎಸ್‌ನಲ್ಲಿ ೯ ತಿಂಗಳಿನಿಂದ ಸಿಲುಕಿರುವ ಅಮೆರಿಕ ಗಗನಯಾತ್ರಿಗಳಾದ ಭಾರತ ಮೂಲದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಅವರನ್ನು ಮರಳಿ ಕರೆತರುವ ಕಾರ್ಯಾಚರಣೆಯನ್ನು ಸ್ಪೇಸ್‌ಎಕ್ಸ್ ಹಾಗೂ ನಾಸಾ ಜಂಟಿಯಾಗಿ ಕಳೆದ ರಾತ್ರಿ ಆರಂಭಿಸಿದೆ. ಕ್ರೂ-೧೦ ಕಾರ್ಯಾಚರಣೆಯಡಿ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯನ್ನು ಹೊತ್ತ ಫ್ಯಾಲ್ಕನ್ ೯ ರಾಕೆಟ್ ನಿನ್ನೆ ರಾತ್ರಿ ಉಡಾವಣೆ ಮಾಡಿದೆ.

************

ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ ಮಹಾರಾಷ್ಟ್ರ ದೇಶದಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಈ ಯೋಜನೆಯಡಿ ೧ ಲಕ್ಷದ ೬೨ ಸಾವಿರದ ೬೩೮ ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಮೂಲಕ ಮಹಾರಾಷ್ಟ್ರ ಈ ಸ್ಥಾನವನ್ನು ಸಾಧಿಸಿದೆ. ಕಳೆದ ವರ್ಷ ಫೆಬ್ರವರಿ ೧೩ ರಂದು ಪ್ರಾರಂಭವಾದ ಈ ಯೋಜನೆ ಈ ವರ್ಷದ ಮಾರ್ಚ್ ೧೦ ರ ವೇಳೆಗೆ ದೇಶಾದ್ಯಂತ ಒಟ್ಟು ೧೦ ಲಕ್ಷದ ೯ ಸಾವಿರ ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಿದೆ. ಈ ಉಪಕ್ರಮಕ್ಕೆ ಮಹಾರಾಷ್ಟ್ರ ಸಕ್ರಿಯವಾಗಿ ಕೊಡುಗೆ ನೀಡುವುದನ್ನು ಮುಂದುವರಿಸಲಿದ್ದು, ೨೦೨೬-೨೭ ರ ವೇಳೆಗೆ ಒಂದು ಕೋಟಿ ಕುಟುಂಬಗಳನ್ನು ತಲುಪುವುದು ಗುರಿಯಾಗಿದೆ.

************

ಪರಸ್ಪರ ಪ್ರಯೋಜನಕಾರಿ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಅಮೆರಿಕದ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಅವರೊಂದಿಗೆ ಚರ್ಚೆಗೆ ಎದುರು ನೋಡುತ್ತಿದ್ದೇನೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ಅವರು, ಕೇಂದ್ರ ಸರ್ಕಾರದ ವಿಧಾನವು ಭಾರತ ಮೊದಲು, ವಿಕಸಿತ ಭಾರತ್ ಮತ್ತು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯಿಂದ ಮಾರ್ಗದರ್ಶಿಸಲ್ಪಡುತ್ತದೆ ಎಂದರು. ಕಳೆದ ವಾರ, ಪಿಯೂಷ್ ಗೋಯಲ್ ವಾಷಿಂಗ್ಟನ್‌ಗೆ ಭೇಟಿ ನೀಡಿ ತಮ್ಮ ಅಮೆರಿಕದ ವಾಣಿಜ್ಯ ಸಚಿವರೊಂದಿಗೆ ಮಾತುಕತೆ ನಡೆಸಿದರು. ಭಾರತ ಮತ್ತು ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ನಡೆಸಲು ಯೋಜಿಸುತ್ತಿರುವುದರಿಂದ ಈ ಚರ್ಚೆಗಳು ಮಹತ್ವದ್ದಾಗಿವೆ.

************

ಈ ತಿಂಗಳ ಮೊದಲನೇ ವಾರದ ಅಂತ್ಯಕ್ಕೆ ಭಾರತದ ವಿದೇಶಿ ವಿನಿಮಯ ಮೀಸಲು ೧೫.೨೬ ಶತಕೋಟಿ ಡಾಲರ್ ಏರಿಕೆಯೊಂದಿಗೆ ೬೫೩.೯೬ ಶತಕೋಟಿ ಡಾಲರ್‌ಗಿಂತ ಹೆಚ್ಚಾಗಿದೆ. ಆರ್‌ಬಿಐ ಬಿಡುಗಡೆಗೊಳಿಸಿದ ಸಾಪ್ತಾಹಿಕ ಅಂಕಿ-ಅಂಶಗಳ ವರದಿ ಪ್ರಕಾರ ವಿದೇಶಿ ಕರೆನ್ಸಿ ಆಸ್ತಿಗಳು ೧೩.೯೩ ಶತಕೋಟಿ ಡಾಲರ್ ಏರಿಕೆಯಾಗಿ ೫೫೭ ಶತಕೋಟಿ ಡಾಲರ್‌ಗಿಂತ ಹೆಚ್ಚಾಗಿದೆ. ಕಳೆದ ವಾರ ಚಿನ್ನದ ಮೀಸಲು ಒಂದು ಶತಕೋಟಿ ಡಾಲರ್‌ನಷ್ಟು ಏರಿಕೆಯಾಗಿ, ಒಟ್ಟು ೭೪.೩೨ ಶತಕೋಟಿ ಡಾಲರ್‌ಗಳಿಗಿಂತ ಹೆಚ್ಚಾಗಿದೆ.

************

ಫೆಬ್ರವರಿ ೧೪ರಿಂದ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ - ಡಬ್ಲ್ಯೂಪಿಎಲ್ ೨೦೨೫ ಟಿ-೨೦ ಕ್ರಿಕೆಟ್ ಟೂರ್ನಿ ಅಂತಿಮ ಹಂತ ತಲುಪಿದ್ದು, ಇಂದು ಮುಂಬೈನ ಬ್ರಬಾರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗು ಮುಂಬೈ ಇಂಡಿಯನ್ಸ್ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ. ಪಂದ್ಯ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

************

ಕೇರಳದ ಪಶ್ಚಿಮಘಟ್ಟದಲ್ಲಿರುವ ವಾಗಾಮೋನ್‌ನಲ್ಲಿ ಇದೇ ೧೯ರಂದು ೨೩ರ ವರೆಗೆ ಅಂತಾರಾಷ್ಟ್ರೀಯ ಪ್ಯಾರಾ ಗ್ಲೈಡಿಂಗ್ ಉತ್ಸವ ನಡೆಯಲಿದೆ. ಅಂತಾರಾಷ್ಟ್ರೀಯ ಅಗ್ರ ಲ್ಯಾಂಡಿಂಗ್ ನಿಖರತೆ ಕಪ್ ಸೇರಿದಂತೆ ಒಟ್ಟು ೬ ವಿಭಾಗಗಳನ್ನು ಈ ಉತ್ಸವ ಒಳಗೊಂಡಿದ್ದು, ೧೧ ರಾಷ್ಟ್ರಗಳ ೮೬ ಪ್ಯಾರಾ ಗ್ಲೈಡರ್‌ಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಉತ್ಸವವನ್ನು ಫೆಡರೇಷನ್ ಏರೋನಾಟಿಕಲ್ ಇಂಟರ್ ನ್ಯಾಷನಲ್ - ಎಫ್‌ಎಐ ಅಧಿಕೃತವಾಗಿ ಗುರುತಿಸಿದೆ.

************